ತಾರೀಖು 15ನೆ ಏಪ್ರಿಲ್ 1907.

ನಂ. 9573—Med. 41-06—10, ಕೂನೂರಲ್ಲಿರುವ ದಕ್ಷಿಣ ಇಂಡಿಯಾವಿನ ಪ್ಯಾಸ್ಚರ್ ಇನ್‌ಸ್ಟಿಟ್ಯೂಟಿನ ಡೈರೆಕ್ಟ
ವರಿಂದ ಕೊಡಲ್ಪಟ್ಟ, ಈ ಕೆಳಗೆ ಸಮೂಹಿಸುವ ನೋಟೀಸನ್ನು ಸರ್ವಸ್ಥರ ತಿಳಿವಳಿಕೆಯ ಬಗ್ಗೆ ಪುನಃ ಪ್ರಕಟಿಸಿ ಇದೆ :—

ನೋ ಟಿ ಸ್.

ಕೂನೂರಲ್ಲಿರುವ ದಕ್ಷಿಣ ಇಂಡಿಯಾವಿನ ಪ್ಯಾಸ್ಚರ್ ಇನ್‌ಸ್ಟಿಟ್ಯೂಟ್ ಎಂಬ ಆಸ್ಪತ್ರೆಯು, ಹುಚ್ಚು ಪ್ರಾಣಿಗಳಿಂದ ಕಡಿಸಿ
ಟ್ಟವರ ಚಿಕಿತ್ಸೆಗೋಸ್ಕರ, 1907ನೆ ಇಸವಿಯ ಏಪ್ರಿಲ್ ಒಂದನೆ ತಾರೀಖಿನ ಲಾಗಾಯಿತು ತೆರೆಯಲ್ಪಡುತ್ತದೆ.

ತಾರೀಖು 15ನೆ ಏಪ್ರಿಲ್ 1907.

ನಂ. 9577—Med. 247—06—5, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇ
ನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆ
ಸಕ್ಕೆ ಎಂದರೆ, ಬೇಲೂರಿನಲ್ಲಿ ಬಂದು ಹೊಸ ಡೆಡ್ ಹೌಸ್ ಯಾ ಶವಪರೀಕ್ಷೆಯ ಮನೆಯನ್ನು ಕಟ್ಟುವುದಕ್ಕೋಸ್ಕರ ಅವಶ್ಯಕವಾ
ಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಸಕಲೇಶಪುರದ ಚಾರ್ಜಿನಲ್ಲಿರು
ಸೀನಿಯರ್ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರಕೊಟ್ಟಿದೆ.

ತಿಪ್ಪೆಗುಪ್ಪ	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂ.	ಮುಸಿಕ್ಕಿ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹಾಸನ.	ಬೇಲೂರು.	ಬೇಲೂರು.	ಬೇಲೂರು.	ವೆಂಕಟರಾಯರ ಮಗ ಸುಬ್ಬಾ ರಾವ್.	177ರ ಭಾಗ	ಮುಸಿಕ್ಕಿ	ಎ. ಗು. 4 3	ರೂ. ಅ. ಪೈ. 5 4	ಗುಂ. ಚದರಗಜ. 12 , 40	ಸರ್ವೆ 171, 172 ಮತ್ತು 173ನೆ ನಂಬರುಗಳು.	ಸರ್ವೆ 176ನೆ ನಂಬರು ಮತ್ತು 177ನೆ ನಂಬರಿನ ಭಾಗ.	ಸರ್ವೆ 177ನೆ ನಂಬರಿನ ಭಾಗ.	ಸರ್ವೆ 5 ಮತ್ತು 175ನೆ ನಂಬರುಗಳು.

ತಾರೀಖು 15ನೆ ಏಪ್ರಿಲ್ 1907.

ನಂ. 9572—Ml. 237-06—14, ಸ್ಯ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯು
ಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ
ಕೆಲಸಕ್ಕೆ ಎಂದರೆ, ಮೈಸೂರು ನಗರದ ಗಾಣಿಗರಿಗೆ ಎಣ್ಣೆ ತೆಗೆಯುವ ಬಗ್ಗೆ ಬಂದು ಸ್ಥಳ ವಿಭಜಿಸಿಕೊಡುವುದಕ್ಕೋಸ್ಕರ ಅವ
ಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮೈಸೂರು ಸಬ್ ಡಿವಿಜನ್ ಚಾರ್ಜಿ
ನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ತಿಪ್ಪೆಗುಪ್ಪ	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರು.	ಮುಸಿಕ್ಕಿ, ತರಿ ಯಾ ಬಾಗಾಯತು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ.	ಕಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಮೈಸೂರು	ನಂಜನಗೂಡು	ಬಿಳಿಗೌಡನಕಟ್ಟೆ	ಹೊನ್ನೆಗೌಡ	192	ಮುಸಿಕ್ಕಿ	ಎ. ಗು. ಚ. 5 26	ರೂ. ಅ. ಪೈ. 5 8	ಎ. ಗು. ಚ. 5 26	ರೂ. ಅ. ಪೈ. 5 8	ಗಾಡಿ ದಾರಿ	193ನೆ ಸರ್ವೆ ನಂಬರು	191ನೆ ಸರ್ವೆ ನಂಬರು	ರಸ್ತೆ